- -                    ಅಸಲು ದಾವೆ ಸಂ: **44/2020** ಪಿ .ಡಬ್ಲು-**1**

**ದಿ: 08-01-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಪಾಟೀಸವಾಲು: 1 ಮತ್ತು 2ನೇ ಪ್ರತಿವಾದಿ ಪರ ಶ್ರೀ ಬಿ.ಎಸ್. ವಕೀಲರಿಂದ:**

1. ನಾನು 10 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ನಾನು ಒಟ್ಟು 04 ಸಾಕ್ಷಿ ಪ್ರಮಾಣ ಪತ್ರಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಅದರಲ್ಲಿ ಏನೂ ಬರೆದಿದ್ದಾರೆಂದು ನನಗೆ ಗೊತ್ತಿರುತ್ತದೆ. ನನ್ನ ತಾತನ ಹೆಸರು ಗುರುಬಸ್ಸಯ್ಯ ಅಂತಾ ಇದ್ದು, ಅವರು ತೀರಿಕೊಂಡು 30-40 ವರ್ಷಗಳಾಗಿರುತ್ತದೆ.

ಗುರುಬಸ್ಸಯ್ಯನ ಹೆಂಡತಿ ಹೆಸರು ಗಂಗಮ್ಮ ಅಂತಾ ಇರುತ್ತದೆ ಅವರು ಅವರು ತೀರಿಕೊಂಡು 20 ವರ್ಷಗಳಾಗಿರುತ್ತದೆ. ಗುರುಬಸ್ಸಯ್ಯನಿಗೆ ಶಿವಲಿಂಗಯ್ಯ, ಅಮರಯ್ಯ, ಚಂದ್ರಶೇಖರ ಅಂತಾ 03 ಜನ ಮಕ್ಕಳಿರುತ್ತಾರೆ. ಒಬ್ಬ ಹೆಣ್ಣು ಮಗಳು ಅನ್ನಪೂರ್ಣ ಅಂತಾ ಇದ್ದು ಅವರು ತೀರಿಕೊಂಡಿರುತ್ತಾರೆ. ಅನ್ನಪೂರ್ಣ ಇವರಿಗೆ ಇಬ್ಬರು ಹೆಣ್ಣು ಮಕ್ಕಳಿದ್ದು ಅವರು ಜೀವಂತವಾಗಿರುತ್ತಾರೆ.

2. ಗುರುಬಸ್ಸಯ್ಯನಿಗೆ ಒಟ್ಟು ಎಷ್ಟು ಆಸ್ತಿಗಳು ಇವೆ ಎಂದರೆ ಸಾಕ್ಷಿಯು 5 ವರೆ ಎಕರೆ ಇದೆ ಎನ್ನುತ್ತಾರೆ. ಆ ಜಮೀನುಗಳ ಸ ನಂ 31 ಮತ್ತು 44 ಅಂತಾ ಇರುತ್ತವೆ. ಸ ನಂ 31 ಗಾಣಧಾಳ ಸೀಮಾಂತರದಲ್ಲಿರುತ್ತದೆ. ಗಾಣಧಾಳ ಸೀಮಾ ಸ ನಂ 31 ಜಮೀನು ಗುರುಬಸ್ಸಯ್ಯನ ಹೆಸರಿಗೆ ಇತ್ತು ಎಂದು ಸಂಬಂಧಪಟ್ಟ ದಾಖಲಾತಿಯನ್ನು ನ್ಯಾಯಾಲಯಕ್ಕೆ ಕೊಟ್ಟಿದ್ದೇನೆ. ನನ್ನ ತಾತಾ ಗುರುಬಸ್ಸಯ್ಯನಿಂದ ನನ್ನ ತಂದೆ ಚಂದ್ರಶೇಖರಯ್ಯ ಇವರಿಗೆ ಪಹಣಿ ಆಗಿರುತ್ತದೆ. ಈಗ 2ನೇ ಪ್ರತಿವಾದಿ ಹೆಸರಿಗೆ ಪಹಣಿ ಆಗಿರುತ್ತದೆ. ನನ್ನ ತಂದೆ ಹೆಸರಿಗೆ ಯಾವ ವರ್ಷದಲ್ಲಿ ಮುಟೆಶನ್ ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ, ನನ್ನ ತಾತಾ ತೀರಿಕೊಂಡ ಮೇಲೆ ನನ್ನ ತಂದೆಯ ಹೆಸರಿಗೆ ಮುಟೇಶನ್ ಆಗಿರುತ್ತದೆ. ನನ್ನ ತಂದೆ ಕೆ ಎಸ್ ಆರ್ ಟಿ ಸಿ ಇಲಾಖೆಯಲ್ಲಿ ನಿರ್ವಾಹಕರಾಗಿ ಕೆಲಸ ಮಾಡುತ್ತಿದ್ದರು. ನಿಮ್ಮ ತಂದೆ ಮೊದಲು ತ್ರಿವೇಣಿ ಟ್ರಾವೆಲ್ಸ್ ನಲ್ಲಿ ನಿರ್ವಾಹಕರೆಂದು ಕೆಲಸ ಮಾಡುತ್ತಿದ್ದರು ಎಂದರೆ ಸರಿ. ನಿಮ್ಮ ತಂದೆ ಅವರ ಸ್ವಂತ ದುಡಿಮೆಯಿಂದ ಗಾಣಧಾಳ ಸೀಮಾ ಸ ನಂ 31, ವಿಸ್ತೀರ್ಣ 02 ಎಕರೆ 30 ಗುಂಟೆ ಜಮೀನನನ್ನು ಮಲ್ಲಯ್ಯ ತಂದೆ ದುರಗಯ್ಯ ತಳವಾರ ಎನ್ನುವವರಿಂದ ಖರೀದಿ ರಜಿಸ್ಟರ್ ಮಾಡಿರುತ್ತಾರೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಖರೀದಿ ಪತ್ರದ ಆಧಾರದ ಮೇರೆಗೆ ನಿಮ್ಮ ತಂದೆಯ ಹೆಸರಿಗೆ ಮುಟೇಶನ್ ಆಗಿರುತ್ತದೆ ಎಂದರೆ ಸರಿ. ಸದರಿ ಆಸ್ತಿಯು ನಿಮ್ಮ ತಂದೆಯ ಸ್ವಯಾರ್ಜಿತ ಆಸ್ತಿಯಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವಾ ಆಸ್ತಿ ಮೊದಲು ನಿಮ್ಮ ತಾತಾ ಗುರುಬಸ್ಸಯ್ಯ ಇವರ ಹೆಸರಿನಲ್ಲಿತ್ತು ನಂತರ ನಿಮ್ಮ ತಂದೆ

ಹೆಸರಿಗೆ  ಮುಟೇಶನ್ ಆಗಿದೆ ಎಂದು ನೀವು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸಾಕ್ಷಿಯು ನನಗೆ ತಿಳಿದಂತೆ ಹೇಳುತ್ತಿದ್ದೇನೆ ಎನ್ನು ತ್ತಾರೆ.

3. ದಾವಾ ಆಸ್ತಿ ಸ ನಂ 44/ಬಿ-3, ವಿಸ್ತೀರ್ಣ 02 ಎಕರೆ 37 ಗುಂಟೆ ಹುಲಿಗುಡ್ಡ ಸೀಮಾಂತರದಲ್ಲಿರುತ್ತದೆ. ಸದರಿ ಆಸ್ತಿ ಮೊದಲು ನನ್ನ ತಾತಾ ಗುರುಬಸ್ಸಯ್ಯನ ಹೆಸರಿನಲ್ಲಿತ್ತು, ನಂತರ ನಿಮ್ಮ ತಂದೆಯವರಾದ ಚಂದ್ರಶೇಖರಯ್ಯ ಇವರ ಹೆಸರಿಗೆ ಆಗಿದೆ ಯಾವ ಆಧಾರದ ಮೇಲೆ  ಮತ್ತು ಯಾವ ವರ್ಷದಲ್ಲಿ ಆಗಿದೆ ಎಂದು ನನಗೆ ಗೊತ್ತಿಲ್ಲ. ಮನೆಯ ಗ್ರಾಮ ಪಂಚಾಯಿತಿ ನಂಬರ್ 173 ಇದು ನನ್ನ ತಂದೆಯ ಹೆಸರಿನಲ್ಲಿದೆ. ಸದರಿ ಮನೆಯ ಉದ್ದ ಮತ್ತು ಅಗಲ ಅಳತೆ ಎಷ್ಟು ಇದೆ ಎಂದು ನನಗೆ ಗೊತ್ತಿಲ್ಲ. ಸದರಿ ಮನೆ ಪೂರ್ವದಲ್ಲಿ ಯಾರ ಹೆಸರಿನಲ್ಲಿತ್ತು ನನಗೆ ಗೊತ್ತಿಲ್ಲ.  ನಂತರ ನಿಮ್ಮ ತಂದೆಯವರಾದ ಚಂದ್ರಶೇಖರಯ್ಯ ಇವರ ಹೆಸರಿಗೆ ಆಗಿದೆ ಯಾವ ಆಧಾರದ ಮೇಲೆ  ಮತ್ತು ಯಾವ ವರ್ಷದಲ್ಲಿ ಆಗಿದೆ ಎಂದು ನನಗೆ ಗೊತ್ತಿಲ್ಲ. ಪ್ಲಾಟ್ ನಂಬರ್ 532 ನನ್ನ ತಾಯಿ ಪಾರ್ವತೆಮ್ಮ ಇವರ ಹೆಸರಿನಲ್ಲಿದೆ. ಈ ಪ್ಲಾಟ್ ನಿಮ್ಮ ತಾಯಿ ಅವರಿಗೆ ಹೇಗೆ ಬಂದಿರುತ್ತದೆ ಎಂದರೆ ಸಾಕ್ಷಿಯು ಅವರ ತಂದೆ ಕಡೆಯಿಂದ ಬಂದಿರುತ್ತದೆ ಎಂದು ಹೇಳುತ್ತಾರೆ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಈ ಪ್ಲಾಟ್ ನಿಮ್ಮ ತಾಯಿಯ ಹೆಸರಿಗೆ ನಿಮ್ಮ ತಂದೆಯವರು ಖರೀದಿ ಮಾಡಿದ್ದು ಇರುತ್ತದೆ ನೀವು ಅವರ ತಂದೆಯ ಕಡೆಯಿಂದ ಬಂದಿರುತ್ತದೆ ಎಂದು  ಸುಳ್ಳು  ಹೇಳುತ್ತಿದ್ದೀರಿ ಎಂದರೆ ಸಾಕ್ಷಿಯು ನನ್ನ ತಾಯಿಯವರು ಹೇಳಿರುತ್ತಾರೆ ನನಗೆ ಗೊತ್ತಿಲ್ಲ ಎನ್ನು ತ್ತಾರೆ. ಈ ಪ್ಲಾಟ್ ಜಂಟಿ ಕುಟುಂಬದ ಆಸ್ತಿಯಾಗಿರುತ್ತದೆ ಎಂದರೆ ಸರಿ. ದಾವಾ ಸಲ್ಲಿಸುವ ಕಾಲಕ್ಕೆ ಪ್ಲಾಟ್ ನಂಬರ್ 532  ಈ ದಾವೆಯಲ್ಲಿ ಸೇರಿಸಿದ್ದೀರಾ ಎಂದರೆ ಸಾಕ್ಷಿಯು ಇಲ್ಲ  ಎಂದು ಹೇಳುತ್ತಾರೆ.  ನಿಮ್ಮ ತಾಯಿ ಹೆಸರಿನಲ್ಲಿರುವ ಪ್ಲಾಟ್ ನಂಬರ್ 532 ನ್ನು ಮುಚ್ಚಿಟ್ಟು ಉಳಿದ ಆಸ್ತಿಗಳ ಮೇಲೆ ದಾವೆ ಸಲ್ಲಿಸಿದ್ದೀರಾ ಎಂದರೆ ಸಾಕ್ಷಿಯು ನನ್ನ ತಂದೆಯ ಹೆಸರಿನಲ್ಲಿರುವ ಆಸ್ತಿಗಳನ್ನು ಸೇರಿಸಿರುತ್ತೇನೆ ನಂತರ ನನ್ನ ತಂದೆಯವರು ನನ್ನ ತಾಯಿಯವರ ಹೆಸರಿಗೆ ಇರುವ ಪ್ಲಾಟ್ ನ್ನು ದಾವೆಯಲ್ಲಿ ಸೇರಿಸಿರುತ್ತಾರೆ

ಎನ್ನುತ್ತಾರೆ. ನೀವು ಉದ್ದೇಶಪೂರ್ವಕವಾಗಿ ಫ್ಲಾಟ್ ನಂಬರ್ 532 ನ್ನು ಈ ದಾವೆಯಲ್ಲಿ ಸೇರಿಸಿರುವುದಿಲ್ಲ ಎಂದರೆ ಸರಿಯಲ್ಲ.

4. 7ನೇ ಪ್ರತಿವಾದಿ ಶಶಿರೇಖಾ ಇವರು ನನ್ನ ತಂಗಿಯಾಗಬೇಕು. ಪ್ರತಿವಾದಿ ನಂಬರ್ 3 ಮತ್ತು 4 ರವರನ್ನು ನಾನು ನೋಡಿರುವುದಿಲ್ಲ ಅವರು ನಮಗೆ ಸಂಬಂಧಪಟ್ಟಿದ್ದವರಲ್ಲ ಎನ್ನುತ್ತಾರೆ. 3ನೇ ಪ್ರತಿವಾದಿಯ ತಂದೆಯ ಹೆಸರು ಏನೂ ಇದೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎನ್ನುತ್ತಾರೆ. ಪ್ರತಿವಾದಿ ನಂಬರ್ 3 ಮತ್ತು 4 ರವರ ತಂದೆಯ ಹೆಸರು ಚಂದ್ರಶೇಖರ ಎಂದು ತೋರಿಸಿದ್ದಾರೆ ಎಂದರೆ ಸಾಕ್ಷಿಯು ಇರಬಹುದು ಅವರು ನನಗೆ ಸಂಬಂಧಪಟ್ಟಿಲ್ಲ ಎನ್ನುತ್ತಾರೆ. 5ನೇ ಪ್ರತಿವಾದಿಯ ಗಂಡನ ಹೆಸರು ಚಂದ್ರಶೇಖರ ಎಂದು ತೋರಿಸಿದ್ದಾರೆ ಎಂದರೆ ಸಾಕ್ಷಿಯು ಇರಬಹುದು ಅವರು ನಮಗೆ ಸಂಬಂಧ ಇಲ್ಲ ಎನ್ನುತ್ತಾರೆ. ಪ್ರತಿವಾದಿ ನಂಬರ್ 5 ರವರು ಚಂದ್ರಶೇಖರ ಇವರ ಹೆಂಡತಿಯಾಗಿರುತ್ತಾರೆ ಮತ್ತು ಪ್ರತಿವಾದಿ ನಂಬರ್ 3 ಮತ್ತು 4 ರವರ ಮಕ್ಕಳಾಗಿರುತ್ತಾರೆ ಎಂದರೆ ಸಾಕ್ಷಿದಾರರು ಸಾಕ್ಷಿ ಬೇಕು ಎನ್ನುತ್ತಾರೆ. ನಿಮ್ಮ ತಂದೆ ಪ್ರತಿವಾದಿ ನಂಬರ್ -1 ರವರು ನಿಮ್ಮನ್ನು ಸೇರಿಸಿ ಒಟ್ಟು 4 ಜನ ಮಕ್ಕಳ ಮದುವೆಯನ್ನು ಮಾಡಿರುತ್ತಾರೆ ಎಂದರೆ ಸಾಕ್ಷಿಯು ನನ್ನ ಮತ್ತು ನನ್ನ ತಂಗಿಯ ಮದುವೆಯನ್ನು ಮಾಡಿರುವುದಿಲ್ಲ ಎನ್ನುತ್ತಾರೆ. ನೀವು ಉದ್ದೇಶಪೂರ್ವಕವಾಗಿ ನಿಮ್ಮ ಮತ್ತು ನಿಮ್ಮ ತಂಗಿಯ ಮದುವೆಯನ್ನು ನಿಮ್ಮ ತಂದೆ ಮಾಡಿರುವುದಿಲ್ಲ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ನಿಮ್ಮ ಮತ್ತು ನಿಮ್ಮ ತಂಗಿಯ ವಿದ್ಯಾಭ್ಯಾಸ ಮತ್ತು ನಿಮ್ಮ ನ್ನು ಬೆಳೆಸಿರುವುದು ನಿಮ್ಮ ತಂದೆ ಎಂದರೆ ಸಾಕ್ಷಿಯು ಇಲ್ಲ ನಾನು ನನ್ನ ತಾಯಿಯ ತವರು ಮನೆಯಲ್ಲಿ ಬೆಳೆದಿದ್ದೇನೆ ಎನ್ನುತ್ತಾರೆ.

5. ನಿಮ್ಮ ತಂದೆಯವರು ನಿವೃತ್ತಿಯಾದ ನಂತರ ಅವರಿಗೆ ಆರೋಗ್ಯ ಸರಿಯಾಗಿರುವುದಿಲ್ಲ ಎಂದರೆ ಸರಿ. ಕುಟುಂಬದ ನಿರ್ವಹಣೆಗಾಗಿ ನಿಮ್ಮ ತಂದೆ ಸಾಲ ಮಾಡಿರುತ್ತಾರೆ ಎಂದರೆ ಸಾಕ್ಷಿಯು ಅವರು ವೈಯಕ್ತಿಕವಾಗಿ ಸಾಲ ಮಾಡಿರಬಹುದು ನನಗೆ ಸಂಬಂಧ ಇಲ್ಲ ಎನ್ನುತ್ತಾರೆ. ದಿನಾಂಕ: 11-09-2018 ರಂದು ಸಾಲ ಮರುಪಾವತಿ ಮಾಡುವ ಉದ್ದೇಶದಿಂದ ಜಮೀನು ಸ ನಂ 31/6, ವಿಸ್ತೀರ್ಣ 02 ಎಕರೆ 30 ಗುಂಟೆ

ಜಮೀನು 2ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಮಾರಾಟ ಮಾಡಿದ ಆಧಾರದ ಮೇಲೆ 2ನೇ ಪ್ರತಿವಾದಿ ಹೆಸರಿಗೆ ಮುಟೇಶನ್ ವರ್ಗಾವಣೆ ಆಗಿದೆ ಎಂದರೆ ಸರಿ. ಈಗ 2ನೇ ಪ್ರತಿವಾದಿಯೇ ದಾವಾ ಆಸ್ತಿಯ ಮಾಲೀಕ ಮತ್ತು ಕಬ್ಜಾದಾರನಾಗಿರುತ್ತಾನೆಂದರೆ ಸರಿಯಲ್ಲ. ಈ ದಾವಾ ಆಸ್ತಿಯಲ್ಲಿ ನಿಮಗಾಗಲೀ ನಿಮ್ಮ ತಂಗಿಗಾಗಲೀ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ಈ ದಾವಾ ಆಸ್ತಿಯಲ್ಲಿ ಭಾಗಾಂಶ ಪಡೆಯಬೇಕೆಂಬ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೀರಾ ಎಂದರೆ ಸರಿಯಲ್ಲ. ಸತ್ಯಾಂಶ ಮರೆಮಾಚಿ ಸುಳ್ಳು ಸಂಗತಿಗಳನ್ನು ವಾದ ಪತ್ರದಲ್ಲಿ ತಿಳಿಸಿ ದಾವಾ ಸಲ್ಲಿಸಿದ್ದೀರಾ ಎಂದರೆ ಸರಿಯಲ್ಲ. ನಿಮ್ಮ ಸಾಕ್ಷಿ ಪ್ರಮಾಣ ಪತ್ರದಲ್ಲಿ ಬರೆದ ಎಲ್ಲಾ ವಿಷಯಗಳು ಸುಳ್ಳು ಎಂದರೆ ಸರಿಯಲ್ಲ.

ಶ್ರೀ ವಿ ಡಿ ಸಿ ವಕೀಲರು ಪಾಟೀಸವಾಲಿಗೆ ಸಮಯವಕಾಶ ಕೋರಿದ್ದರಿಂದ ಮುಂದೂಡಲಾಯಿತು.

(ಸಾಕ್ಷಿಯು ನೀಡಿರುವ ಸಾಕ್ಷವನ್ನು ಯಥಾವತ್ತಾಗಿ ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

**ಓ.ಹೇ.ಕೇ.ಸರಿ ಇದೆ.**
ಸಹಿ/–

ಸಿವಿಲ್ ಜಡ್ಜ್ & ಜೆ.ಎಂ.ಎಫ್.ಸಿ.

ದೇವದುರ್ಗ